**OS No.136/2008**
**PW.3**

<u>ದಿನಾಂಕಃ **10.11.2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ</u>

ಚಿಕ್ಕರಂಗಪ್ಪನಿಗೆ ತಿಮ್ಮಯ್ಯ ಎಂಬ ಒಬ್ಬನೇ ಮಗ ಇರುತ್ತಾನೆ. ಚಿಕ್ಕರಂಗಪ್ಪನ ತಂದೆಯ ಹೆಸರು ತಿಮ್ಮಯ್ಯ ಎಂದರೆ ಸರಿ. ಚಿಕ್ಕದಾಸಪ್ಪ ಪ್ರತಿವಾದಿ-1 ರವರನ್ನು ಸಾಕಿ ಕೊಂಡಿದ್ದರು ಎಂದರೆ ಸರಿ. ಚಿಕ್ಕದಾಸಪ್ಪ ಮತ್ತು ತಿಮ್ಮಯ್ಯ ವಿಭಾಗ ಮಾಡಿಕೊಂಡಿರುವ ಬಗ್ಗೆ ಗೊತ್ತಿಲ್ಲ. ದಾವಾ ಐಟಂ ನಂ.1 ನ್ನು ಚಿಕ್ಕದಾಸಪ್ಪ ಪ್ರತಿವಾದಿ-1 ರವರಿಗೆ ದಾನ ಪತ್ರ ಮಾಡಿಕೊಟ್ಟಿದ್ದರು ಎಂದರೆ ಸರಿ. ತಿಮ್ಮಯ್ಯರವರ ತಂದೆಗೆ ಮೂರು ಜನ ಅಣ್ಣ ತಮ್ಮಂದಿರು. ಅವರೆಂದರೆ ಮೂಗತಿಮ್ಮಯ್ಯ, ಚಿಕ್ಕದಾಸಪ್ಪ ಮತ್ತು ಮುರಾರಪ್ಪ. ಅವರ ಮಧ್ಯೆ ವಿಭಾಗ ಆಗಿರುತ್ತದೆ. ಮೂಗತಿಮ್ಮಯ್ಯ ಚಿಕ್ಕರಂಗಪ್ಪರವರಿಗೆ ಜಮೀನು ಕೊಟ್ಟಿರುವ ಬಗ್ಗೆ ದಾಖಲೆ ಇಲ್ಲ. ಚಿಕ್ಕರಂಗಪ್ಪನಿಗೆ ಗಂಗಮ್ಮ ಮತ್ತು ಈರಮ್ಮ ಎಂಬ ಇಬ್ಬರು ಹೆಂಡತಿ ಇದ್ದಾರೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಚಿಕ್ಕರಂಗಪ್ಪ ಮತ್ತು ತಿಮ್ಮಯ್ಯ ದಾವಾಸ್ವತ್ತನ್ನು ವಿಭಾಗ ಮಾಡಿಕೊಂಡಿಲ್ಲ.

ದಿಃ 19.03.1997 ರಲ್ಲಿ ವಾದಿ ತನ್ನ ಭಾಗದ ಸ್ವತ್ತನ್ನು ಹನುಮಂತರಾಯಪ್ಪ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ದಿಃ 10.05.2006 ರಲ್ಲಿ ಪ್ರತಿವಾದಿ-1 ರವರು ಪ್ರತಿವಾದಿ-2 ರವರಿಗೆ ದಾನ ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಸ್ವತ್ತಿನ ಕಂದಾಯ ದಾಖಲೆಗಳನ್ನು ನೋಡಿರುವುದಿಲ್ಲ ಮತ್ತು ಕಂದಾಯ ಯಾರು ಪಾವತಿಸುತ್ತಿದ್ದಾರೆ ಎಂದರೆ ಗೊತ್ತಿಲ್ಲ. ವಾದಿಯ ಮಗನಿಗೆ ನನ್ನ ಮಗಳನ್ನು ಕೊಟ್ಟು ಮದುವೆ ಮಾಡಿರುತ್ತೇನೆ ಎದರೆ ಸರಿ. ಸದರಿ ಸ್ವತ್ತು ಪ್ರತಿವಾದಿ-2 ರವರ ಸ್ವತ್ತು ವಾದಿಯ ಪಿತ್ರಾರ್ಜಿತ ಸ್ವತ್ತಲ್ಲ ಎಂದರೆ ಗೊತ್ತಿಲ್ಲ. ವಾದಿ ತನ್ನ ಸ್ವತ್ತನ್ನು ಮಾರಾಟ ಮಾಡಿದ್ದರಿಂದ ವಾದಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ವಾದಿಯ ಸಂಬಂಧಿಕನಾಗಿರವುದರಿಂದ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

**(ನನ್ನ ಉಕ್ತಲೇಖನ ರೀತ್ಯಾತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ,**
ದೊಡ್ಡಬಳ್ಳಾಪುರ .